# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 1-9-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಚಾಲಿ ಅಡಿಕೆ ದರ ಮತ್ತೆ ದುರ್ಬಲ

ಅಡಿಕೆ(ಹಿಂದಿನ ವರ್ಷದ ಉತ್ಪಾದನೆ) ಚಾಲಿ ದರ ಈ ಹಿಂದೆ ಹೆಚ್ಚಳವಾಗಿದ್ದು ಮತ್ತೆ ದುರ್ಬಲಗೊಂಡು ದರ ಇಳಿಕೆಯಾಗಿದೆ. ಹಿಂದೆ ದರ ಹೆಚ್ಚಳದ ಸೂಚನೆಯಿಂದ ಮಾರುಕಟ್ಟೆಗೆ ಆವಕ ಹೆಚ್ಚಳದಲ್ಲಿದ್ದು, ಬೇಡಿಕೆ ದುರ್ಬಲಗೊಂಡು ದರ ಮತ್ತೆ ಹಿನ್ನಡೆಯಾಗಿದೆ. ಪ್ರತಿಕೂಲ ಹವಾಮಾನದಿಂದ ಹಿಂದಿನ ವರ್ಷದ ಉತ್ಪಾದನೆ ಕೆಲವಡೆ ಇಳಿಕೆಯಾಗಿದ್ದು, ಹಿಂದಿನ ವರ್ಷದ ಅಡಿಕೆ ಇನ್ನು ಹಳೆಯಡಿಕೆ, ಚೋಲ್ ಆಗುವ ಹಂತದಲ್ಲಿದ್ದು, ದರ ದುರ್ಬಲಗೊಂಡಿರುವುದರಿಂದ ಮುಂದೆ ಆವಕ ಇಳಿಕೆಯಾಗುವ ಸಾಧ್ಯತೆಯಿದ್ದು, ಬೇಡಿಕೆ ಹೆಚ್ಚಳವಾದಾಗ ದರ ಮತ್ತೆ ಹೆಚ್ಚಳ ಕಾಣುವ ಸಾಧ್ಯತೆ ಇದೆ. ಈ ವರ್ಷವೂ ಎಡೆಬಿಡದ ಮಳೆಯಿಂದ ವ್ಯಾಪಕವಾಗಿ ಬೆಳೆಹಾನಿಯ ವರದಿಗಳಾಗಿವೆ. ಹೆಚ್ಚಿನಡೆ ಮಳೆಯಿಂದ ಕೋಳೆರೋಗದ ಹಾವಳಿಯಿಂದ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಗಳಿವೆ. ಈ ತಿಂಗಳ ನಂತರ ಅಲ್ಪ ಪ್ರಮಾಣದಲ್ಲಿ ಈ ವರ್ಷದ ಹೊಸ ಅಡಿಕೆ ಮಾರುಕಟ್ಟೆಗೆ ಆವಕವಾಗಲಾರಂಭವಾಗುವ ಸಾಧ್ಯತೆಯಿದೆ.

## ನೆಲಗಡಲೆ ಉತ್ಪಾದನೆ ಇಳಿಕೆ, ದರ ಹೆಚ್ಚಳ

ಈ ವರ್ಷ ಗುಜರಾತ್‌ನಲ್ಲಿ ಖಾರೀಫ್ ಬೆಳೆಯಲ್ಲಿ ನೆಲಗಡಲೆ ಬಿತ್ತನೆ ಪ್ರದೇಶ ಇಳಿಕೆಯಾಗಿದೆಯೆನ್ನಲಾಗಿದೆ. ಪರ್ಯಾಯವಾಗಿ ಹೆಚ್ಚಿನ ಆದಾಯ ಗಳಿಕೆಯ ಸೋಯಾಬೀನ್, ಹತ್ತಿ ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆಯೆನ್ನಲಾಗಿದೆ. ಇತರ ಬೆಳೆಯುವ ಪ್ರದೇಶಗಳಲ್ಲೂ ಬಿತ್ತನೆ ಪ್ರಮಾಣ ಇಳಿಕೆಯಿರುವುದರಿಂದ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದೆ. ಈಗಾಗಲೇ ದರ ಹೆಚ್ಚಳದಲ್ಲಿದ್ದು, ನೆಲಗಡಲೆ ಬೀಜ ವಿವಿಧ ರೀತಿಗಳಲ್ಲಿ ಬಳಕೆಯಾಗುತ್ತಿದೆ. ಜೊತೆಗೆ ರಫ್ತು ಬೇಡಿಕೆಯೂ ಇರುವುದರಿಂದ ಉತ್ಪಾದನೆ ಇಳಿಕೆಯಾದಲ್ಲಿ ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳವಾಗುವ ಸಾಧ್ಯತೆಗಳಿವೆ.

## ಡಾಲರ್‌ಗೆದುರು ರಿಂಗಿಟ್ಸ್ ದರ ಕುಸಿತವಾಗಿರುವುದೂ ಪಾಮೆಣ್ಣೆ ದರ ಇಳಿಕೆಗೆ ಪೂರಕ

ಡಾಲರ್‌ಗೆದುರು ಮಲೇಶಿಯನ್ ಪಾಮೆಣ್ಣೆಯ ರಿಂಗಿಟ್ಸ್ ವಿನಿಮಯ ದರ ದಾಖಲೆ ಕುಸಿತ ಕಂಡಿರುವುದೂ ಪಾಮೆಣ್ಣೆ ದರ ಇಳಿಕೆಗೆ ಪೂರಕವಾಗಿ ಪರಿಣಮಿಸಿದೆ. ಇದರೊಂದಿಗೆ ಪಾಮೆಣ್ಣೆಗೆ ಪರ್ಯಾಯ ಖಾದ್ಯತೈಲಗಳ ಬಳಕೆ ಮತ್ತಿತರ ಕಾರಣಗಳೂ ಪಾಮೆಣ್ಣೆ ದರ ಇಳಿಕೆಗೆ ಕಾರಣವಾಗಿದೆ. ಪಾಮೆಣ್ಣೆಯ ಉತ್ಪಾದನೆ ಹೆಚ್ಚಳ ಹಾಗೂ ದಾಸ್ತಾನು ಹೆಚ್ಚಳಗಳೂ ಅದರ ದರ ಇಳಿಕೆಯಲ್ಲಿ ಪರಿಣಾಮ ಬೀರಿದೆ.

## ವಿಯೆಟ್ನಾಂನ ಆರಂಭಿಕ ಕಾಫಿ ದಾಸ್ತಾನು ಅರ್ಧಾಂಶ ಇಳಿಕೆ

ವಿಶ್ವದ 2 ನೇ ಅತಿ ಹೆಚ್ಚು ಕಾಫಿ ಉತ್ಪಾದಕ ದೇಶದ ಈ ವರ್ಷ ಕಾಫಿ ವಿಯೆಟ್ನಾಂನ ಆರಂಭಿಕ ಕಾಫಿ ದಾಸ್ತಾನು ಹಿಂದಿನ ವರ್ಷದ 4 ಲಕ್ಷ ಟನ್‌ಗಳಿಂದ 2 ಲಕ್ಷ ಟನ್‌ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ವಿಯೆಟ್ನಾಂನ 80 ಶೇಕಡಾ ಕಾಫಿ ಉತ್ಪಾದನೆ ರಾಬೆಸ್ಟಾ ಆಗಿದೆಯೆನ್ನಲಾಗಿದೆ. ಜಾಗತಿಕ ರಾಬೆಸ್ಟಾ ಕಾಫಿ ದರದ ಮೇಲೆ ವಿಯೆಟ್ನಾಂನ ಉತ್ಪಾದನೆ, ದಾಸ್ತಾನು ಹಾಗೂ ಪೂರೈಕೆಗಳು ಪರಿಣಾಮ ಬೀರುತ್ತಿವೆ.

## ಬ್ರೆಜಿಲ್‌ನ ಕಾಫಿ ಉತ್ಪಾದನೆ ನಿರೀಕ್ಷೆಗಿಂತ ಇಳಿಕೆ

ಪ್ರತಿಕೂಲ ಹವಾಮಾನ (ಒಣಹವೆ ಹಾಗೂ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಸಮರ್ಪಕ ಮಳೆಯಾಗದಿರುವಿಕೆ) ದಿಂದ ಬ್ರೆಜಿಲ್‌ನ ಕಾಫಿ ಉತ್ಪಾದನೆ ಈ ವರ್ಷ ಅಂದಾಜಿಸಿಕ್ಕಿಂತ ಇಳಿಕೆಯಾಗಲಿದೆಯೆನ್ನಲಾಗಿದೆ. ಕೊಲಂಬಿಯಾದಲ್ಲೂ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದೆ. ಪ್ರಮುಖ ಬೆಳೆಯುವ ದೇಶಗಳಲ್ಲಿ ಉತ್ಪಾದನೆ ಇಳಿಕೆಯ ಸಾಧ್ಯತೆಗಳಿರುವುದು ಜಾಗತಿಕ ಕಾಫಿ ದರ ಹೆಚ್ಚಳದಲ್ಲಿರುವ ಸೂಚನೆಗಳೆನ್ನಲಾಗಿದೆ. ಬೇಡಿಕೆ ಹಾಗೂ ಪೂರೈಕೆಗಳಿಗನುಗುಣವಾಗಿ ದರ ವ್ಯತ್ಯಾಸಗಳಾಗುವ ಸಾಧ್ಯತೆಗಳಿವೆ.

## ಸೆಪ್ಟೆಂಬರ್ ತಿಂಗಳಲ್ಲಿ ಗೋಡಂಬಿ ತಿರುಳು ಬೇಡಿಕೆ ಹೆಚ್ಚಳ ಸಾಧ್ಯತೆ

ಕೇರಳದಲ್ಲಿ ಓಣಂ ಹಾಗೂ ನಂತರ ನವರಾತ್ರಿ ಹಬ್ಬಗಳು ಸಮೀಪಿಸುತ್ತಿದ್ದು, ಕೋವಿಡ್ ಪ್ರತಿಬಂಧಗಳಿಂದ ಮುಕ್ತವಾಗಿರುವುದರಿಂದ ಈ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಗೋಡಂಬಿ ತಿರುಳಿಗೆ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆಗಳಿವೆ. ಹೋಟೆಲ್, ಬೇಕರಿ ವಲಯ ಸಿಹಿತಿಂಡಿ ತಯಾರಕರಿಂದ ಬೇಡಿಕೆ ಹೆಚ್ಚಳ ಕಾಣುವ ಸಾಧ್ಯತೆಗಳಿವೆ. ಮುಂದೆ ದೀಪಾವಳಿ ಹಬ್ಬವೂ ಇರುವುದರಿಂದ ಬೇಡಿಕೆ ಉತ್ತಮವಿರುವ ಸಾಧ್ಯತೆಗಳಿವೆ.